C.W. 1 P.W.1

**ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ. ನ್ಯಾ ದಂಡಾಧಿಕಾರಿಗಳ ನ್ಯಾಯಾಲಯ, ಕುಮಟಾ**

**ಸಿ.ಸಿ. ನಂ.**

ಸಿ.ಡಬ್ಲ್ಯು

ಪಿ.ಡಬ್ಲ್ಯು

| | | |
|---|---|---|
| ಸಾಕ್ಷಿದಾರರ ಹೆಸರು | – | ಮಾರುತಿ ಗೌಡ |
| ತಂದೆಯ ಹೆಸರು | – | ಹುಲಿಯಾ ಗೌಡ |
| ವಯಸ್ಸು | – | 47 ವರ್ಷ |
| ಉದ್ಯೋಗ | – | ಕೂಲಿ ಕೆಲಸ |
| ವಾಸ್ತವ್ಯ | – | ದುಂಡಕುಳಿ, ಕುಮಟಾ ತಾಲೂಕ |

(ಇಂದು ದಿನಾಂಕ 17-08-2021 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಖ್ಯ ವಿಚಾರಣೆ –ಮಾನ್ಯ ಸ.ಸ.ಅ. ರವರಿಂದ**

ನಾನು ಆರೋಪಿತರನ್ನು ನೋಡಿರುವುದಿಲ್ಲ. ದಿನಾಂಕ 14-02-2017 ರಂದು ಶ್ರೀ ಬೊಂಬೆ ಲಿಂಗೇಶ್ವರ ದೇವಸ್ಥಾನದಲ್ಲಿ ಕಳ್ಳತನವಾದ ವಿಚಾರದಲ್ಲಿ ನಾನು ಫಿರ್ಯಾದನ್ನು ದಾಖಲಿಸಿರುತ್ತೇನೆ.

ನಾನು ಪ್ರತಿನಿತ್ಯ ಬೆಳಿಗ್ಗೆ ದೇವಸ್ಥಾನದಲ್ಲಿ ದೇವರಿಗೆ ಹೂವನ್ನು ಹಾಕುತ್ತೇನೆ. ನಿತ್ಯದಂತೆ ನಾನು ಮೇಲೆ ತಿಳಿಸಿದ ದಿನಾಂಕದಂದು ದೇವರಿಗೆ ಹೂವನ್ನು ಹಾಕಲು ಬೆಳಿಗ್ಗೆ 6.30 ಗಂಟೆಗೆ ಹೋದಾಗ ದೇವಸ್ಥಾನದ ಬಾಗಿಲು ತೆರೆದುಕೊಂಡಿತ್ತು. ಅಲ್ಲದೇ ಒಳಗಿನ ಬಾಗಿಲನ್ನು ಸಹ ಒಡೆದಿದ್ದರು. ದೇವಸ್ಥಾನದ ಒಳಗಡೆ ಹೋಗಿ ನೋಡಿದಾಗ ಕಾಣಿಕೆ ಹುಂಡಿ, ದೇವರ ಕೊರಳಿಗೆ ಹಾಕಲಾದ 3 ಬೆಳ್ಳಿಯ ಸರ, ದೇವರಿಗೆ ಹಾಕಲಾಗಿದ್ದ ಬೆಳ್ಳಿಯ ಹಣೆಯ ಪಟ್ಟಿ ಕಳುವು ಆಗಿರುವುದು ಗಮನಕ್ಕೆ ಬಂದಿರುತ್ತದೆ. ಕಳ್ಳತನವಾದ ವಿಚಾರವನ್ನು ನಾನು ಊರಿನವರಿಗೆ ತಿಳಿಸಿದ್ದು, ಅವರು ಪೊಲೀಸನವರಿಗೆ ತಿಳಿಸಿರುತ್ತಾರೆ. ನಾನು ಕಳ್ಳತನವಾದ ವಿಚಾರದಲ್ಲಿ ನೀಡಿರುವ ಫಿರ್ಯಾದನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು

ಫಿರ್ಯಾದನ್ನು, ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಫಿರ್ಯಾದನ್ನು ನಿ.ಪಿ.1 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.1(ಎ) ಎಂದು ಗುರುತಿಸಲಾಯಿತು. ಕಳ್ಳತನ ರಾತ್ರಿ 10.00 ಗಂಟೆಯ ನಂತರ ಹಾಗೂ ಬೆಳಿಗ್ಗೆ 6.30 ಗಂಟೆಯ ಒಳಗೆ ಆಗಿರಬಹುದು ಎಂದು ನಾನು ಹೇಳಿರುತ್ತೇನೆ. ಈಗ ನ್ಯಾಯಾಲಯದ ಮುಂದೆ ಇರುವ ಬೀಗ ನಮ್ಮ ದೇವಸ್ಥಾನಕ್ಕೆ ಹಾಕಲಾಗಿದ್ದ ಬೀಗ ಆಗಿರುತ್ತದೆ. ನಾನು ಆರೋಪಿತರನ್ನು ಗುರುತಿಸಿ ಪೊಲೀಸನವರ ಸಮಕ್ಷಮ ಯಾವುದೇ ಮರುಹೇಳಿಕೆಯನ್ನು ನೀಡಿರುವುದಿಲ್ಲ.

**(ಈ ಹಂತದಲ್ಲಿ ಸದ್ರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಸ.ಸ.ಅ. ರವರು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)**

**ಪಾಟೀ ಸವಾಲು –ಮಾನ್ಯ ಸ.ಸ.ಅ. ರವರಿಂದ**

ದಿನಾಂಕ 23-10-2018 ರಂದು ಪೊಲೀಸನವರು ಆರೋಪಿತರನ್ನು ದೇವಸ್ಥಾನಕ್ಕೆ ಕರೆತಂದು ಕಳ್ಳತನ ಮಾಡಿದ್ದು, ಇದೇ ವ್ಯಕ್ತಿಗಳು ಆಗಿರುತ್ತಾರೆ ಎಂದು ತಿಳಿಸಿದ ವಿಚಾರ ನನಗೆ ತಿಳಿದು ಬಂದಿರುತ್ತದೆ ಎಂದು ಮರು ಹೇಳಿಕೆ ನೀಡಿರುತ್ತೇನೆ ಎಂದರೆ ಸಾಕ್ಷಿಯು ಅವರನ್ನು ಕರೆತಂದಾಗ ನಾನು ಇರಲಿಲ್ಲ ಎಂದು ನುಡಿಯುತ್ತಾರೆ. ನಾನು ಮರುಹೇಳಿಕೆ ಸಂದರ್ಭದಲ್ಲಿ ದೇವಸ್ಥಾನದ ದೇವರ ಬೆಳ್ಳಿಯ ಕಿರೀಟ ಕಳುವಾಗಿದ್ದು, ಫಿರ್ಯಾದಿನಲ್ಲಿ ಮುಖವಾಡ ಎಂದು ತಿಳಿಸಿದ್ದು ಅದನ್ನು ಸರಿಪಡಿಸಿಕೊಳ್ಳುವಂತೆ ತಿಳಿಸಿದ್ದೇನೆ ಎಂದರೆ ಸರಿ. ನಾನು ದೇವಸ್ಥಾನದ ಬೀಗವನ್ನು ಕಬ್ಬಿಣದ ಸರಳಿನಿಂದ ಮೀಟಿ ತೆಗೆದಿರಬಹುದು ಎಂಬ ಅಂಶವನ್ನು ಮರುಹೇಳಿಕೆಯಲ್ಲಿ ತಿಳಿಸಿರುತ್ತೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು – ಆರೋಪಿತರ ಪರ ಶ್ರೀ ಎನ್.ಎಂ.ಎನ್. ವಕೀಲರಿಂದ**

ನಾನು ದುಂಡಕುಳಿ ನಿವಾಸಿ. ದೇವಸ್ಥಾನದಿಂದ ನನ್ನ ಮನೆ ಸುಮಾರು ಅರ್ಧ ಕಿಲೋ ಮೀಟರ ದೂರದಲ್ಲಿದೆ. ದೇವಸ್ಥಾನದ ಹತ್ತಿರದಲ್ಲಿ ಯಾವುದೇ ಮನೆಗಳು ಇರುವುದಿಲ್ಲ. ನಾನು ಹಾಲಕ್ಕಿ ಒಕ್ಕಲಿಗ ಮತದವನು. ಬೊಂಬೆ ಲಿಂಗೇಶ್ವರ ದೇವಸ್ಥಾನ ನಮ್ಮ ಸಮಾಜದವರಿಗೆ ಸೇರಿದ ದೇವಸ್ಥಾನ ಆಗಿರುತ್ತದೆ.

ಸದರಿ ದೇವಸ್ಥಾನ ಆಡಳಿತ ಮಂಡಳಿ ಮೂಲಕ ನಿರ್ವಹಣೆ ಮಾಡಲ್ಪಡುವುದಿಲ್ಲ, ಆದರೆ ಗ್ರಾಮದವರು ಸೇರಿ ಅದರ ನಿರ್ವಹಣೆಯನ್ನು ನೋಡಿಕೊಳ್ಳುತ್ತಾರೆ. 2017 ನೇ ಸಾಲಿನಲ್ಲಿ ದೇವಸ್ಥಾನದ ನಿರ್ವಹಣೆಯನ್ನು ನನಗೇ ನೀಡಲಾಗಿತ್ತು. ಆ ಸಂದರ್ಭದಲ್ಲಿ ದೇವಸ್ಥಾನದ ಪೂಜಾ ಕಾರ್ಯಗಳನ್ನು ನಾನೇ ಮಾಡಿಕೊಂಡು ಬರುತ್ತಿದ್ದೆನು.

ದೇವಸ್ಥಾನದ ಮುಂದಿನ ಬಾಗಿಲು ಶಟರ್ಸ ಮಾದರಿಯದ್ದಾಗಿದ್ದು, ಅದಕ್ಕೆ ಬೀಗ ಹಾಕುತ್ತಿದ್ದೆವು. ಘಟನೆಯ ದಿನ ಶಟರ್ಸನ ಒಂದು ಬದಿಗೆ ಒಂದು ಬೀಗ ಹಾಗೂ ಮತ್ತೊಂದು ಬದಿಗೆ ಒಂದು ಬೀಗ ಹಾಕಲಾಗಿತ್ತು. ಈಗ ನ್ಯಾಯಾಲಯದ ಮುಂದೆ ಇರುವ ಬೀಗದ ಅಳತೆಗಿಂತ ದೊಡ್ಡ ಬೀಗವನ್ನು ಶಟರ್ಸಗೆ ಹಾಕಲಾಗಿತ್ತು. ದೇವಸ್ಥಾನಕ್ಕೆ ಎದುರಿನ ದ್ವಾರ ಬಿಟ್ಟು ಬಲಬದಿಗೆ ಮತ್ತು ಎಡಬದಿಗೆ ದ್ವಾರಗಳು ಇರುತ್ತವೆ. ದೇವಸ್ಥಾನದ ಬಲಬದಿಗೆ ಮತ್ತು ಎಡಬದಿಗೆ ಹೊರಗಡೆಯಿಂದ ಬೀಗ ಹಾಕುವ ಅವಕಾಶ ಇರುವುದಿಲ್ಲ. ನಾನು ದೇವಸ್ಥಾನದ ನಿರ್ವಹಣೆಯನ್ನು ನಾನೇ ಮಾಡುತ್ತಿದ್ದ ಬಗ್ಗೆ ಪೊಲೀಸನವರಿಗೆ ಹೇಳಿರುತ್ತೇನೆ. ದೇವಸ್ಥಾನದ ದೇವರ ಎಡಬದಿಗೆ ಹಾಗೂ ನಮ್ಮ ಬಲಬದಿಗೆ ಇರುವ ಬಾಗಿಲನ್ನು ಒಡೆಯಲಾಗಿತ್ತು. ಗರ್ಭಗುಡಿಯ ದ್ವಾರಕ್ಕೆ 2 ಬೀಗಗಳು ಇದ್ದು, ಎರಡನ್ನೂ ಒಡೆದಿದ್ದರು. ನಾನು ಘಟನೆಯ ದಿನ ಹೋಗಿ ನೋಡಿದಾಗ ಒಂದು ಬೀಗ ಇತ್ತು. ಸಾಕ್ಷಿಗೆ ಅಂತಿಮ ವರದಿಯೊಂದಿಗೆ ಸಲ್ಲಿಸಲಾದ ಪೋಟೊವನ್ನು ತೋರಿಸಿ ಸದರಿ ಪೋಟೊದಲ್ಲಿ ಬಾಗಿಲನ್ನು ಮೀಟಿರುವ ಬಗ್ಗೆ ಕಂಡು ಬರುವುದಿಲ್ಲ ಎಂದು ಕೇಳಲಾಗಿ ಸಾಕ್ಷಿಯು ಕಂಡುಬರುವುದಿಲ್ಲ ಎಂದು ನುಡಿಯುತ್ತಾರೆ. ಸಾಮಾನ್ಯವಾಗಿ ದೇವಸ್ಥಾನದ ಅವಧಿ ಮುಕ್ತಾಯವಾದ ನಂತರ ದೇವರ ಆಭರಣಗಳನ್ನು ಪ್ರತ್ಯೇಕ ಪೆಟ್ಟಿಗೆಯಲ್ಲಿ ಇಡುವುದು ರೂಢಿ ಎಂದರೆ ಸರಿ. ಆಭರಣಗಳು ದೇವರ ಕೊರಳಿನಲ್ಲಿ ಇತ್ತು. ದೇವರಿಗೆ ಹಾಕಲಾಗಿದ್ದ ಆಭರಣದ ಬಗ್ಗೆ ಯಾವುದೇ ಪಟ್ಟಿಯನ್ನು ಮಾಡಿರುವುದಿಲ್ಲ.

ಕಾಣಿಕೆ ಹುಂಡಿಯನ್ನು ಗರ್ಭಗುಡಿಯ ಹೊರಭಾಗದಲ್ಲಿ ಇಡಲಾಗಿದ್ದು, ಅದಕ್ಕೆ ಬೀಗ ಹಾಕಲಾಗಿತ್ತು. ಸದರಿ ಕಾಣಿಕೆ ಹುಂಡಿಯ ಬೀಗವನ್ನು ಸಹ ಒಡೆಯಲಾಗಿತ್ತು. ಕಾಣಿಕೆ ಹುಂಡಿಯ ಬೀಗ ಒಡೆಯಲಾಗಿದ್ದು, ಅದು ಕೆಳಗೆ ಬಿದ್ದಿತ್ತು. ಕಾಣಿಕೆ ಹುಂಡಿಗೆ ಹಾಕಲಾಗಿದ್ದ ಬೀಗ ಈಗ ನ್ಯಾಯಾಲಯದ ಮುಂದೆ ಇರುವ ಬೀಗಕ್ಕಿಂತ ಸಣ್ಣ ಬೀಗ ಆಗಿತ್ತು. ಸದರಿ ವಿಚಾರವನ್ನು ನಾನು ಪೊಲೀಸನವರಿಗೆ ತಿಳಿಸಿರುತ್ತೇನೆ. ನಾನು ಕಳ್ಳತನದ ವಿಚಾರ ತಿಳಿದ ನಂತರ ಅದನ್ನು ನಾಗು ಗೌಡ, ಮಹೇಶ ಗೌಡ, ಬೊಮ್ಮು ಗೌಡ ಇವರುಗಳಿಗೆ ತಿಳಿಸಿರುತ್ತೇನೆ. ಪೊಲೀಸನವರಿಗೆ ನಾನು ಸದ್ರಿಯವರ ಹೆಸರನ್ನು ಹೇಳಿರುವುದಿಲ್ಲ.

ಕಳ್ಳತನವಾದ ಸುಮಾರು ಒಂದು ವಾರಗಳ ನಂತರ ಪೊಲೀಸನವರು ನನ್ನನ್ನು 2 ಬಾರಿ ಠಾಣೆಗೆ ಕರೆಯಿಸಿರುತ್ತಾರೆ. ನಾನು ದೂರನ್ನು ಬರೆದ ನಂತರ ಸಹಿ ಮಾಡಿರುತ್ತೇನೆ. ನಾನು ಹೇಳಿದಂತೆ ಯಾವುದೇ ಕಳ್ಳತನ ದೇವಸ್ಥಾನದಲ್ಲಿ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಕಾಣಿಕೆ ಹುಂಡಿಯನ್ನು ಒಡೆಯಲಾಗಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರ ಮಾತಿಗೆ ಬೆಲೆಕೊಟ್ಟು ಸುಳ್ಳು ದೂರನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಇರುವ ಬೀಗ ಎಲ್ಲಾ ಕಡೆ ದೊರೆಯುತ್ತದೆ ಎಂದರೆ ಸರಿ. ಸದರಿ ಬೀಗದ ಕೀಲಿಕೈ ನನ್ನ ಬಳಿ ಇದೆ. ಬೀಗದ ಕೀಲಿಯನ್ನು ಪೊಲೀಸನವರು ನನ್ನನ್ನು ಪಡೆದುಕೊಂಡು ಹೋಗಿರುತ್ತಾರೆ. ನ್ಯಾಯಾಲಯದ ಮುಂದೆ ಇರುವ ಬೀಗಕ್ಕೂ, ಪ್ರಸ್ತುತ ಪ್ರಕರಣಕ್ಕೂ ಯಾವುದೇ ರೀತಿಯಾದ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತರಿಗೂ, ಪ್ರಸ್ತುತ ಪ್ರಕರಣಕ್ಕೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ – ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಪ್ರ.ದ.ನ್ಯಾದಂ. ಕುಮಟಾ